BHIMAPPA SOMAPPA NAVI
Digitally signed by BHIMAPPA SOMAPPA NAVI

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
(ಹಿಂದಿನ ಹೆಸರು "ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ")

Karnataka State Akkamahadevi Women's University, Vijayapura
(Formerly known as "Karnataka State Women's University, Vijayapura")

# NAAC II CYCLE – SSR: Criteria 7:

## 7.1.9: Constitutional Obligations

## Programs organized by various department, cells and centers of the university

7.1.9 (A)

ಪ್ರಜಾವಾಣಿ ದಿ ೧೬-೦೨-೨೦೧೯ ಪು - ೨

## ಒಂದು ದಿನದ ವಿಚಾರ ಸಂಕಿರಣದಲ್ಲಿ ಡಾ.ಸಂಜೀವ ಕುಲಕರ್ಣಿ ಅಭಿಮತ

# ಗಾಂಧೀಜಿ ಸಂದೇಶ ದಾರಿದೀಪ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಗಾಂಧೀಜಿ ಅವರು ನಮ್ಮೆಲ್ಲರಿಗೂ ಅತ್ಯುತ್ತಮವಾದ ವಿಚಾರಗಳನ್ನು ನೀಡಿ ಹೋದ ಮಹಾತ್ಮರು. ಅವರ ಸಂದೇಶಗಳೇ ನಮ್ಮ ಬದುಕಿಗೆ ದಾರಿ ದೀಪ' ಧಾರವಾಡ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ಸಂಜೀವ ಕುಲಕರ್ಣಿ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಭಾನುವಾರ ವಿವಿಯ ಗಾಂಧಿ ಅಧ್ಯಯನ ಕೇಂದ್ರ, ಎನ್‌ಎಸ್‌ಎಸ್ ಕೋಶ, ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಣ ಮತ್ತು ಅಭಿವೃದ್ಧಿಯ ಕುರಿತು ಗಾಂಧೀಜಿಯವರ ವಿಚಾರಗಳು ಎಂಬ ವಿಷಯದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಗಾಂಧೀಜಿಯವರು ತಮ್ಮ ಜೀವನವನ್ನೇ ಸಂದೇಶವಾಗಿ ಉಳಿಯುವಂತೆ ಬದುಕಿ ತೋರಿಸಿದರು. ನಮ್ಮ ಜೀವನದ ಪ್ರತಿ ಹಂತಕ್ಕೂ ಅವರು ಪ್ರಸ್ತುತವಾಗುತ್ತಾರೆ. ನಾವೆಲ್ಲರೂ ಇಂದು ಓಟದ ಬದುಕನ್ನು ನಡೆಸುತ್ತಾ ಸ್ವಾರ್ಥ ಜೀವನವನ್ನು ನಡೆಸುತ್ತಿದ್ದೇವೆ. ನಮ್ಮ ಆಸೆ, ಆಮಿಷಗಳಿಗೆ ನಮ್ಮ ಸುತ್ತಲಿರುವ ಸುಂದರ ವಾತಾವರಣವನ್ನು ಹಾಳು ಮಾಡುತ್ತಿದ್ದೇವೆ. ಕಾಡನ್ನು ನಾಶ ಮಾಡಿ ಕಾಂಕ್ರೀಟ್ ಜಗತ್ತು ಬೆಳೆಸುತ್ತಿದ್ದೇವೆ. ಇದರಿಂದ ನೆಮ್ಮದಿ ಜೀವನ ದೂರಾಗುತ್ತಿದೆ' ಎಂದು ಹೇಳಿದರು.



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಭಾನುವಾರ ನಡೆದ ವಿಚಾರ ಸಂಕಿರಣವನ್ನು ಡಾ.ಸಂಜೀವ ಕುಲಕರ್ಣಿ ಉದ್ಘಾಟಿಸಿದರು

ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಬಿ.ಎಸ್. ಲಕ್ಕಣ್ಣನವರ, 'ಒಳ್ಳೆಯದನ್ನು ಕಲಿಸುವುದು ಶಿಕ್ಷಣ. ಅಂತಹ ಶಿಕ್ಷಣದ ಮಹತ್ವವನ್ನು ಮಹಾತ್ಮ ಗಾಂಧೀಜಿಯವರು ನಮಗೆ ತಿಳಿಸಿ ಕೊಟ್ಟಿದ್ದಾರೆ. ಗಾಂಧಿ ನಮ್ಮ ಬದುಕಿನ ಪ್ರತಿ ಹಂತಕ್ಕೂ ಸಹ ಪ್ರಸ್ತುತ. ಎಲ್ಲ ಭಾಗಗಳಲ್ಲಿಯೂ ಸಹ ನಾವು ಅವರ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬಹುದು' ಎಂದರು.

'ಗಾಂಧೀಜಿಯವರನ್ನು ಒಂದು ಅಂಶಕ್ಕೆ ಮಾತ್ರ ಸೀಮಿತವಾಗಿಡಲು ಸಾಧ್ಯವಿಲ್ಲ. ಅವರ ವಿಚಾರಗಳು ಅತ್ಯಂತ ವಿಶಾಲವಾದಂತವು. ಎಲ್ಲ ರಂಗಗಳಲ್ಲಿಯೂ ತಮ್ಮದೇ ಆದ ವಿಚರಾಗಳನ್ನು, ಸಂದೇಶಗಳನ್ನು ನೀಡಿದ್ದಾರೆ. ಗ್ರಾಮೀಣ ಅಭಿವೃದ್ಧಿ, ರಾಜಕೀಯ, ಪತ್ರಿಕೋದ್ಯಮ, ಕೃಷಿ, ಸಮಾಜ ಸುಧಾರಣೆ, ದೇಶದ ಅಭಿವೃದ್ಧಿ ಹೀಗೆ ಹತ್ತು ಹಲವಾರು ರಂಗಗಳಿಗೆ ಸಾಕಷ್ಟು ಅತ್ಯುತ್ತಮವಾದ ವಿಚಾರಗಳನ್ನು, ಸಂದೇಶಗಳನ್ನು ನೀಡಿದ್ದಾರೆ' ಎಂದು ತಿಳಿಸಿದರು.

> ಕೌಶಲಗಳ ಜತೆ ಜ್ಞಾನ ಬೆಳೆಸುವುದೇ ಶಿಕ್ಷಣ ಎಂಬ ಪರಿಕಲ್ಪನೆಯನ್ನು ಗಾಂಧೀಜಿ ನೀಡಿದ್ದರು. ಅದಕ್ಕೆ ವಿರುದ್ಧವಾಗಿ ಬದುಕುತ್ತಿರುವುದು ವಿಷಾದನೀಯ
>
> **ಬಿ.ಎಸ್.ಲಕ್ಕಣ್ಣನವರ**
> ಸಹಾಯಕ ಪ್ರಾಧ್ಯಾಪಕ

ವಿವಿಯ ಗಾಂಧಿ ಅಧ್ಯಯನ ಕೇಂದ್ರದ ಸಂಯೋಜಕಿ ಡಾ.ತಹಮೀನಾ ಕೋಲಾರ, ಲೇಖಕ ಡಾ.ನಾಗಣ್ಣ ಕಿಲಾರಿ ಸೇರಿದಂತೆ ವಿವಿ ಸಿಬ್ಬಂದಿ, ಸ್ನಾತಕೋತ್ತರ ವಿದ್ಯಾರ್ಥಿನಿಯರು ಹಾಗೂ ವಿವಿಧ ಶಾಲೆಗಳ ಶಿಕ್ಷಕರು ಇದ್ದರು.

ರಾಮಕೃಷ್ಣ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಜೀಂ ಪ್ರೇಮ್‌ಜಿ ಫೌಂಡೇಷನ್ ಸದಸ್ಯ ಓಂ ಪ್ರಕಾಶ ಕಾರ್ಯಕ್ರಮ ನಿರೂಪಿಸಿದರು.

Event: Special Lecture on Gandhiji's Concepts
Date: 16-02-2019, Prajavani, page-02
NSS
Resource person: Dr. Sanjeev Kulkarni

7.1.9 (1a)

ವಿಜಯವಾಣಿ. ದಿ. 3/10/21 ಪು-2


ವಿಜಯಪುರ ನಗರಾದ್ಯಂತ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಶನಿವಾರ ಆಚರಿಸಲಾಯಿತು. ಸರ್ಕಾರಿ ಹಾಗೂ ಸಂಘ ಸಂಸ್ಥೆಗಳ ಕಚೇರಿ, ಶಾಲೆ, ಕಾಲೇಜುಗಳಲ್ಲಿ ನಡೆದ ಜಯಂತಿಯಲ್ಲಿ ಅಧಿಕಾರಿಗಳು, ಗಣ್ಯರು, ಪ್ರತಿನಿಧಿಗಳು ಹಾಗೂ ಶಿಕ್ಷಕರು ಭಾಗವಹಿಸಿ ಮಹಾನ್ ನಾಯಕರಿಗೆ ಗೌರವ ಸಲ್ಲಿಸಿದರು.

# ಸಾಮರಸ್ಯ ಜೀವನಕ್ಕೆ ಗಾಂಧಿ ತತ್ವ ಪ್ರೇರಕ

## ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ಅಭಿಮತ । ಮಹಿಳಾ ವಿವಿಯಲ್ಲಿ ಗಾಂಧಿ-ಶಾಸ್ತ್ರಿ ಜಯಂತಿ ಕಾರ್ಯಕ್ರಮ

ವಿಜಯಪುರ: ಇಂದಿನ ಆಧುನಿಕ ಜಗತ್ತಿಗೆ ಶಾಂತಿ, ಸರಳತೆ, ಪರಸ್ಪರ ಸಾಮರಸ್ಯದ ಜೀವನವನ್ನು ನಡೆಸಲು ಗಾಂಧಿ ತತ್ವಗಳು ಪ್ರೇರಕ ಎಂದು ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ ಹೇಳಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಕೋಶ ಹಾಗೂ ಗಾಂಧಿ ಅಧ್ಯಯನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಶನಿವಾರ ನಡೆದ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇಂದಿನ ಜಾಗತೀಕರಣದ ಸನ್ನಿವೇಶದಲ್ಲಿ ತಾಳ್ಮೆ ಮತ್ತು ಸೌಹಾರ್ದತೆ ಅಗತ್ಯವಾಗಿದೆ. ಇವುಗಳನ್ನು ಗಾಂಧೀಜಿಯವರನ್ನು ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ಪ್ರೇರಣೆಯಾಗಿಸಿಕೊಂಡು ಜೀವನದಲ್ಲಿ ಅಳವಡಿಕೊಳ್ಳಬೇಕೆಂದು ಹೇಳಿದರು.



ಪ್ರೊ.ಬಿ.ಕೆ. ತುಳಸಿಮಾಲ

ಕುಲಸಚಿವೆ ಪ್ರೊ. ಆರ್.ಸುನಂದಮ್ಮ ಮಾತನಾಡಿ, ಗಾಂಧೀಜಿ ನಮ್ಮಲ್ಲಿಯೇ ಇದ್ದಾರೆ. ಗಾಂಧೀಜಿಯವರ ತತ್ವಾದರ್ಶಗಳನ್ನು ನಾವು ಅಳವಡಿಸಿಕೊಂಡಾಗ, ಸರಳ ಜೀವನ ಶೈಲಿಯನ್ನು ರೂಢಿಸಿಕೊಂಡಾಗ ಗಾಂಧೀಜಿಯವರನ್ನು ಮುಖಾಮುಖಿ ಯಾಗಿ ನಾವು ಕಾಣಬಹುದಾಗಿದೆ. ಮಹಿಳೆಯರಿಗೆ ಎಲ್ಲ ರಂಗಗಳಲ್ಲಿಯೂ ಪ್ರಾತಿನಿಧ್ಯ ಸಿಗಬೇಕು, ಅಂದಾಗ ಮಾತ್ರ ಸ್ವರಾಜ್ಯ ಪ್ರತಿಪಾದನೆಗೆ ಅರ್ಥಬರುತ್ತದೆ ಎಂದರು. ಎರಡನೇ ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಸರಳ ನೈಜ ಸ್ವಭಾವದವರಾಗಿದ್ದರು. ಇವರು ಭಾರತೀಯ ಕೃಷಿಕರಿಗೆ ಹೆಚ್ಚು ಪ್ರೋತ್ಸಾಹ ನೀಡಿದರಲ್ಲದೆ ಹೈನುಗಾರಿಕೆಗೆ ಉತ್ತೇಜನ ನೀಡಿದ್ದರು ಎಂದು ನೆನಪಿಸಿಕೊಂಡರು. ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ನಾಮದೇಗೌಡ, ಗಾಂಧಿ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿ ಡಾ.ಉದಯಕುಮಾರ್ ಕುಲಕರ್ಣಿ ಇತರರಿದ್ದರು.



ವಿಜಯಪುರದ ದರಬಾರ ಸಮೂಹ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಪ್ಲಾಸ್ಟಿಕ್ ನೀಡಿದವರಿಗೆ ಸಕ್ಕರೆ ನೀಡುವ ಮೂಲಕ ಶನಿವಾರ ಮಹಾತ್ಮ ಗಾಂಧಿ ಹಾಗೂ ಲಾಲಾ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಆಚರಿಸಲಾಯಿತು. ನ್ಯಾಗುವಾದಿ ಕೆ.ಬಿ.ಪಾಟೀಲ, ರಾಜೇಶ ದರಬಾರ, ರಾಕೇಶ ದರಬಾರ ಇತರರಿದ್ದರು.

ಪ್ರದರ್ಶಕ ಕಲೆಗಳ ವಿದ್ಯಾರ್ಥಿನಿಯರು ಭಜನೆಗಳನ್ನು ಪ್ರಸ್ತುತ ಪಡಿಸಿದರು.

**ಶಾಂತಿನಿಕೇತನ ಶಿಕ್ಷಣ ಸಂಸ್ಥೆ:** ನಗರದ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ಮಹಾತ್ಮ ಗಾಂಧಿ ಮತ್ತು ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು. ಸಂಸ್ಥೆ ಅಧ್ಯಕ್ಷೆ ಶೀಲಾ ಬಿರಾದಾರ ಮಾತನಾಡಿ, ಗಾಂಧೀಜಿ ಮತ್ತು ಶಾಸ್ತ್ರಿಯವರ ವಿಚಾರಧಾರೆಗಳು ಎಲ್ಲರಿಗೂ ಅನುಕರಣೀಯ. ಈ ಇಬ್ಬರ ವಿಚಾರಧಾರೆಗಳು ಅಮರವಾಗಿವೆ ಎಂದರು.

ದೇಶಕ್ಕಾಗಿ ಈ ಮಹನೀಯರು ತಮ್ಮ ಜೀವನವನ್ನೆ ತ್ಯಾಗ ಮಾಡಿದರು. ಹಾಗೆಯೇ ವಿದ್ಯಾರ್ಥಿಗಳಾದ ನೀವು ಕೂಡ ದೇಶದ ಏಳಿಗೆ, ಅಭಿವೃದ್ಧಿಗೋಸ್ಕರ ದುಡಿಯಬೇಕು. ಅವರಂತೆ ಬದುಕಿ ಬಾಳಬೇಕು. ಗಾಂಧೀಜಿಯವರ ರಾಮರಾಜ್ಯ ನಿರ್ಮಾಣವಾಗಬೇಕಾದರೆ ಭ್ರಷ್ಟಾಚಾರ, ಜಾತೀಯತೆ, ಸಾಮಾಜಿಕ ಅಸಮಾನತೆ, ಮೇಲು-ಕೀಳು, ಕೋಮುವಾದ ತೊಗಲಾಡಿಸಬೇಕು ಎಂದರು.

ವಿದ್ಯಾರ್ಥಿಗಳಾದ ಶುಭಾಂಗಿ ಅನಂತಪುರ, ಸುಮೇಧ ಸೋನಾವನೆ, ಓಂಕಾರ ಮುದಗೋಡ, ಶ್ರೀಹರಿ ದೇಸಾಯಿ ಗಾಂಧೀಜಿ ಮತ್ತು ಶಾಸ್ತ್ರಿಯವರ ಕುರಿತು ಭಾಷಣವನ್ನು ಮಾಡಿದರು. ವಿದ್ಯಾರ್ಥಿಗಳು ರಘುಪತಿ ರಾಘವ ರಾಜಾ ರಾಮ ಎಂಬ ಭಜನೆಯನ್ನು ಮಾಡಿದರು. ಭಾವೈಕ್ಯತೆ ಕುರಿತು ಕಿರುನಾಟಕ ಪ್ರದರ್ಶಿಸಿದರು. ಪ್ರಾಚಾರ್ಯ ಶ್ರೀಧರ ಕುರಬೇಟ, ನಿಕಿತಾ ದೇವಗಿರಕರ, ಶಿಕ್ಷಕರಾದ ಪ್ರವೀಣಕುಮಾರ ಗೆಣ್ಣೂರ, ಎ.ಎಚ್.ನಗರ, ಶ್ರೀದೇವಿ ಜೋಳದ, ಅನಿಲ ಬಾಗೇವಾಡಿ, ಸೀಮಾ, ಸರೋಜಾ, ಮಧುಮತಿ, ದೀಪಾ ತಬುಸುಮ, ಹೀನಾ, ಅಕ್ಷಿನ, ಅಶ್ವಿನಿ, ಈಶ್ವರ, ರೇಣುಕಾ ಕಡೆಮನಿ, ಶ್ವೇತಾ ಪಾಟೀಲ, ಸವಿತಾ ನರಸಲಗಿ ಇತರರಿದ್ದರು.

**ಪಾಲಿಟೆಕ್ನಿಕ್ ಕಾಲೇಜ್:** ನಗರದ ಬಿಎಲ್‌ಡಿಇ ಸಂಸ್ಥೆಯ ಶ್ರೀಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶನಿವಾರ ಮಹಾತ್ಮ ಗಾಂಧೀಜಿ ಮತ್ತು ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮ ದಿನೋತ್ಸವ ಆಚರಿಸಲಾಯಿತು. ಪ್ರಾಚಾರ್ಯ ಎಸ್.ಜಿ.ಗೌಡರ, ವಿದ್ಯಾಲಯದ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳಿದ್ದರು.

Event: Mahatma Gandhi and Lal Bahadur Shastri Birth Anniversary

Date: 3/10/2021, Vijayavani, page-2

Department: NSS Cell

Resource person: K.B. Patil, Rajesh Darbar, Rakesh Darbar

7.1.9 (18)

# KARNATAKA STATE AKKAMAHADEVI WOMEN'S UNIVERSITY, VIJAYAPURA

## SWAMI VIVEKANANDA STUDY CENTRE

To,
Coordinator
NAAC Criterion VII
KSAW University
Vijayapura

Respected sir,

**Subject: Details of the activities conducted by Swami Vivekananda Study Centre.**

- **Establishment:** 2013
- **Co-ordinator:** Mr. Deepak H. Shinde
- **Staff:** 0
- **Non-Teaching Staff:** 0

**OBJECTIVES**

- To spread the idea of the potential divinity of every being and how to manifest it through every action and thought.
- To stress the universal message of India of oneness, respect of diversity and immortality of soul in the words of Swami Vivekananda.
- To pursue the integrated study of philosophy and activities of Swami Vivekananda in Indian as well as global reference.
- To undertake studies of different religions with an objective to spread the idea of harmony of religions.
- To arouse enthusiasm among youth

**VISION**

- The centre was established to propagate the ideologies of Swami Vivekananda among the youth and thereby promote excellence among the younger generation.

## ACTIVITIES CONDUCTED BY SWAMI VIVEKANANDA STUDY CENTRE

| Sl. No | Name of Competition | Date | Number of Participants | Winners |
|---|---|---|---|---|
| 1 | Essay Competition | 03/12/2019 | 42 | 1. Asma Kureshi(28)<br>2. Vijayalaxmi(39)<br>3. Mahadevi Shirur(32) |
| 2 | Quiz Competition | 04/12/2019 | 06 | 1. Saniya Jiddi(06)<br>2. Sangeeta Matapati(08)<br>2. Preeti Talawar(11)<br>3. Nuha(01) |

- **Celebrated 158$^{th}$ birth anniversary of Swami Vivekananda on 12 January 2021 in collaboration with NSS, KSAWU, Vijayapur.**

Thank you

Yours sincerely

Deepak H. Shinde

**Coordinator**
**Swami Vivekananda Study Center**
**Karnataka State Akkamahadevi**
**Women's University Vijayapur-586105**

7.1.9 (1B)

ಭಾರತ ದಿಗ್ವಿಜಯ ದಿನಾಚರಣೆಗೆ ಚಾಲನೆ | ಸ್ವಾಮಿ ವಿವೇಕಾನಂದರ ಬದುಕು ಆದರ್ಶಮಯ

ಉದಯವಾಣಿ. ದಿ. 16/9/21. ಪು - 03

# ವಿಶ್ವಕ್ಕೆ ಭಾರತೀಯ ಸಂಸ್ಕೃತಿ ಪ್ರತಿಬಿಂಬಿಸಿದ್ದೇ ಸ್ವಾಮಿ ವಿವೇಕಾನಂದ

ವಿಜಯಪುರ: ಸ್ವಾಮಿ ವಿವೇಕಾನಂದರು ಚಿಕಾಗೋ ಉಪನ್ಯಾಸದಿಂದ ಭಾರತದ ದೃಷ್ಟಿಕೋನವನ್ನು ವಿಶ್ವದ ಮುಂದೆ ವಿಶಿಷ್ಟ ರೀತಿಯಲ್ಲಿ ಪ್ರದರ್ಶಿಸಿದ್ದು, ನಮ್ಮ ದೇಶದ ಸಂಸ್ಕೃತಿ ಅನಾವರಣಗೊಳಿಸಿದ ಹಿರಿಮೆಯ ಭಾಷಣವಾಗಿತ್ತು ಎಂದು ಭಾರತೀಯ ಶಿಕ್ಷಣ ಮಂಡಳಿ ಕರ್ನಾಟಕ ಉತ್ತರ ಪ್ರಾಂತದ ರಾಜ್ಯಾಧ್ಯಕ್ಷ ಡಾ| ಸತೀಶ ಜಿಗಜಿನ್ನಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕನ್ನಡ ಸಭಾ ಭವನದಲ್ಲಿ ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದಿಂದಾದ ಭಾರತದ ಮರು ನಿರ್ಮಾಣದ ಕುರಿತು ಹಮ್ಮಿಕೊಂಡಿದ್ದ ಭಾರತ ದಿಗ್ವಿಜಯ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ವಿವೇಕಾನಂದರ ಭಾಷಣದಿಂದಲೇ ಭಾರತೀಯರ ಕುರಿತು ವಿಶ್ವಕ್ಕೆ ಮಾದರಿಯಾದ ಧರ್ಮ, ಸಂಸ್ಕೃತಿ ಸಮಾಜ ನೀಡಿರುವ ದೇಶ ಎಂಬುದನ್ನು ಸಾರಿತು ಎಂದು ಬಣ್ಣಿಸಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಭಾರತ ಶಿಕ್ಷಣ ಮಂಡಲದ ಅಖಿಲ ಭಾರತ ಸಹ ಕಾರ್ಯದರ್ಶಿ ಪ್ರೊ| ಮೀನಾ ಚಂದಾವರಕರ್ ಮಾತನಾಡಿ, ವಿವೇಕಾನಂದರ ಚಿಕಾಗೋ ಭಾಷಣದಲ್ಲಿ ಭಾರತದ ಮಹಿಳಾ ಶಕ್ತಿ, ಮಾತೃ ಶಕ್ತಿ, ಗುರು ಶಕ್ತಿ ಸಾರಿದೆ. ಭಾರತೀಯರಲ್ಲಿರುವ ವಸುಧೈವ ಕುಟುಂಬಕಂ, ಜಗತ್ತು ಒಂದು ಕುಟುಂಬ ಎಂಬ ಸತ್ಯ ಜಗತ್ತಿಗೆ ಮನವರಿಕೆ ಮಾಡಿಕೊಡುವ ಐತಿಹಾಸಿಕ ದಿನವಾಗಿತ್ತು ಎಂದು ವಿಶ್ಲೇಷಿಸಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ| ಕೆ. ರಮೇಶ ಮಾತನಾಡಿ, ವಿಶ್ವ ಮಟ್ಟದಲ್ಲಿ ಭಾರತ ಹಾಗೂ ಭಾರತೀಯರ ಬಗ್ಗೆ ವಿಶಿಷ್ಟ ಗೌರವ ಮೂಡಿಸುವ ಕೆಲಸ ಸ್ವಾಮಿ ವಿವೇಕಾನಂದರಿಂದ ಆಗಿದೆ. ಇದು ಭಾರತೀಯರಾದ ನಮಗೆಲ್ಲ ಹೆಮ್ಮೆ ಹಾಗೂ ಗೌರವ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಭಾರತೀಯರಾದ ನಮಗೆಲ್ಲ ಸ್ವಾಮಿ ವಿವೇಕಾನಂದರ ಬದುಕು ಆದರ್ಶಮಯವಾಗಿದ್ದು, ನಿತ್ಯ ಅವನ್ನು ಸ್ಮರಿಸುವುದು ನಮ್ಮ ಕರ್ತವ್ಯವೂ ಹೌದು ಎಂದರು.

ಕುಲಪತಿ ಪ್ರೊ| ಬಿ.ಕೆ. ತುಳಸಿಮಾಲಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತ ವಿಶ್ವಗುರು ಆಗುವ ನಿಟ್ಟಿನಲ್ಲಿ ಸಾಗುತ್ತಿದೆ. ಇದಕ್ಕೆ ಭದ್ರ ಬುನಾದಿ ಹಾಕಿದ್ದೇ ಸ್ವಾಮಿ ವಿವೇಕಾನಂದರ ಚಿಕ್ಯಾಗೋ ಭಾಷಣ. ಪ್ರಸ್ತುತ ಭಾರತವು ಅಭಿವೃದ್ಧಿಯತ್ತ ಹೆಚ್ಚಿನ ಗಮನ ನೀಡಿ ಆರ್ಥಿಕ ಸಬಲೀಕರಣ ಹೊಂದುತ್ತಿದೆ. ಹೀಗಾಗಿ ಇಂದಿನ ಪೀಳಿಗೆ ಅದರಲ್ಲೂ ವಿದ್ಯಾರ್ಥಿಗಳು ಅನೇಕ ಸಂದೇಶ ಅರಿಯುವ ಹಾಗೂ ಆಚರಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ವೈದಿಕ ಶಿಕ್ಷಣ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ| ರಾಜಕುಮಾರ ಮಾಲಿಪಾಟೀಲ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮ ಸಂಯೋಜಕ ಡಾ| ದೀಪಕ ಶಿಂಧೆ ಪರಿಚಯಿಸಿದರು. ವೈದಿಕ ಶಿಕ್ಷಣ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ| ಹನುಮಂತಯ್ಯ ಪೂಜಾರಿ ವಂದಿಸಿದರು.



ವಿಜಯಪುರ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಭಾರತ ದಿಗ್ವಿಜಯ ದಿನಾಚರಣೆಗೆ ಡಾ| ಸತೀಶ ಜಗಜಿನ್ನಿ ಚಾಲನೆ ನೀಡಿದರು.

Event: India's Victory celebration
Date: 16/9/21, Udayavani, p. 03
Dept: KSWUV
Res. person: Dr. Satish Jigajinni

16/9/21

VCPS
16/9/21

7.1.7(12)


ಶಿಕ್ಷಣ ಆಚರಣೆಯಲ್ಲಿ ಮೌಲಾನರ ಸ್ಮರಣೆ

# ವಿಭಜನೆ ವಿರುದ್ಧ
# ...ಾಡಿದ ಸೇನಾನಿಗೆ ನಮನ

...ದಲ ಶಿಕ್ಷಣ
...ಭಜನೆಯನ್ನು
ವಿರುದ್ಧ
ಸೇನಾನಿ
...ಂ ಆಜಾದ್
...ಾರಿಟೇಬಲ್
...ಿ ಫಾರೂಕಿ

...ವಿ ಮಹಿಳಾ
... ಆವರಣದ
ಭವನದಲ್ಲಿ
ಕೇಂದ್ರದ
... ಅಬುಲ್
... ಅಂಗವಾಗಿ
...ಯ ಶಿಕ್ಷಣ
...ಲ್ಲಿ ಅವರು

... ದೇಶವನ್ನು
... ಭಾರತ
... ಹೊಂದಿದ
ಸಮಾಜದಲ್ಲಿ
... ಅವರು
...ಸ್ಥೆಯಲ್ಲಿಯೂ
... ಹೋರಾಟ



ರಾಷ್ಟ್ರೀಯ ಶಿಕ್ಷಣ ದಿನ ಆಚರಣೆ ಕಾರ್ಯಕ್ರಮದಲ್ಲಿ ಅಲ್ ಅಮೀನ ಚಾರಿಟೇಬಲ್ ಫಂಡ್ ಟ್ರಸ್ಟ್‌ನ ರಿಯಾಜ್ ಫಾರೂಕಿ ಮಾತನಾಡಿದರು. ಮಹಿಳಾ ವಿ.ವಿ ಕುಲಪತಿ ಪ್ರೊ.ಸಬಿಹಾ, ಕುಲಸಚಿವ ಪ್ರೊ.ಎಲ್.ಆರ್.ನಾಯಕ ಇದ್ದರು

ನಡೆಸಿದ ಧೀರ. ಅವರ ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿ.ವಿ ಕುಲಪತಿ ಪ್ರೊ.ಸಬಿಹಾ ಮಾತನಾಡಿ, ಮೌಲಾನಾ ಅಬುಲ್ ಕಲಾಂ ಅವರ ಬದುಕಿನ ಮೌಲ್ಯ ಹಾಗೂ ಆಶಯಗಳನ್ನು ವಿದ್ಯಾರ್ಥಿನಿಯರು ಮೈಗೂಡಿಸಿಕೊಂಡು ಶಿಕ್ಷಣದ ಸಂಪೂರ್ಣ ಲಾಭ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕುಲಸಚಿವ ಪ್ರೊ.ಎಲ್.ಆರ್. ನಾಯಕ, ವಿವಿಧ ವಿಭಾಗದ ಪ್ರಾಧ್ಯಾಪಕರು, ಬೋಧಕ, ಬೋಧಕೇತರ ಸಿಬ್ಬಂದಿ, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಮೌಲಾನಾ ಆಜಾದ್ ಕೇಂದ್ರದ ಸಂಯೋಜಕ ಡಾ.ಆರ್. ವಿ.ಗಂಗಶೆಟ್ಟಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಡಾ.ಆನಂದ ಕುಲಕರ್ಣಿ ನಿರೂಪಿಸಿದರು. ಅಹಲ್ಯಾಬಾಯಿ ಮುಜಾವರ ವಂದಿಸಿದರು.

ದಿ ೧೬-೧೧-೧೭

Event: Celebration of National Education day

Date: 19 11 17

Resource person: Riyaz Farooque.

Dept: Moulana Azad Chair

7.1.9 (1D)


(ಪ್ರಜಾವಾಣಿ ೧೮-೧೧-೨೦೧೮ ಪುಟ ೨ ಬಿ.

# ಶೈಕ್ಷಣಿಕ ಪ್ರಗತಿಗೆ ಆಜಾದ್ ಸೇವೆ ಅನನ್ಯ: ಭಂಡಾರಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಮೌಲಾನಾ ಅಬುಲ್ ಕಲಾಂ ಆಜಾದ್ ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಮಂತ್ರಿಗಳಾಗಿ ಯಾವುದೇ ನಿರ್ದಿಷ್ಟ ಜಾತಿ, ಧರ್ಮಕ್ಕೆ ಸೀಮಿತಗೊಳ್ಳದೆ ದೇಶದ ಶೈಕ್ಷಣಿಕ ಪ್ರಗತಿಗಾಗಿ ಸೇವೆ ಸಲ್ಲಿಸಿದರು ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಸದಸ್ಯ ರಫಿ ಭಂಡಾರಿ ಹೇಳಿದರು.

ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಮೌಲಾನಾ ಅಬುಲ್ ಕಲಾಂ ಆಜಾದ್ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದ ಪ್ರತಿಯೊಬ್ಬರು ಸಹ ಶಿಕ್ಷಣ ಪಡೆಯುವಲ್ಲಿ ಒಗ್ಗಟ್ಟಾಗಿದ್ದರೆ ಮಾತ್ರ ರಾಷ್ಟ್ರೀಯ ಐಕ್ಯತೆ ಸಾಧಿಸಲು ಸಾಧ್ಯ. ಆಜಾದ್ ಅವರು ಸಹಿತ ಹೇಳಿದ್ದರು ಎಂದು ತಿಳಿಸಿದರು.



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಶುಕ್ರವಾರ ಮೌಲಾನಾ ಅಬುಲ್ ಕಲಾಂ ಆಜಾದ್ ಜಯಂತಿ ಅಂಗವಾಗಿ ನಡೆದ ರಾಷ್ಟ್ರೀಯ ಶಿಕ್ಷಣ ದಿನಾಚರಣೆಯಲ್ಲಿ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಸದಸ್ಯ ರಫಿ ಭಂಡಾರಿ ಮಾತನಾಡಿದರು

ಮಹಿಳಾ ವಿವಿ ಸಮಾಜಕಾರ್ಯ ವಿಭಾಗದ ಮುಖ್ಯಸ್ಥ ಪ್ರೊ. ಎಸ್.ಎ.ಖಾಜಿ ಮಾತನಾಡಿ, ದೇಶದಲ್ಲಿ ಎಲ್ಲಾ ಧರ್ಮಿಯರು ಒಗ್ಗಟ್ಟಿನಿಂದ ಶಿಕ್ಷಣ ಪಡೆಯುವುದಕ್ಕೆ ಪ್ರಮುಖ ಕಾರಣ ಮೌಲಾನಾ ಅಬುಲ್ ಕಲಾಂ ಆಜಾದ್‌ರು. ಅನ್ಯರಾಷ್ಟ್ರಗಳಲ್ಲಿ ಈ ರೀತಿಯ ಆತ್ಮೀಯ ಬಾಂಧವ್ಯದಿಂದ ಶಿಕ್ಷಣ ಪಡೆಯಲಿಕ್ಕೆ ಅಸಾಧ್ಯ ಎಂದು ಹೇಳಿದರು.

ಮಹಾ ನಾಯಕರ ಆದರ್ಶಗಳನ್ನು ಯುವಕರು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮೌಲಾನಾ ಅಬುಲ್ ಕಲಾಂ ಆಜಾದ್ ಅಧ್ಯಯನ ಕೇಂದ್ರದ ಸಂಯೋಜಕ ಡಾ. ಅಶೋಕಕುಮಾರ ಸುರಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ವೇಳೆ ಭಾಷಣ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಿಸಲಾಯಿತು. ಸಂಗೀತ ವಿಭಾಗದ ವಿದ್ಯಾರ್ಥಿನಿಯರು ಮಹಿಳಾ ಗೀತೆ ಹಾಡಿದರು. ಡಾ.ವಿಷ್ಣು ಶಿಂಧೆ ನಿರೂಪಿಸಿದರು.

Event : Maulana Abdul kalam Azada Jayanti

Date : 18/11/2018 Prajavani Pg no : 2B

Dep : KSAWU

RP : Rapi Bandari

7.1.9

7.1.9 (1H)

# ‘ಮನಸಿನ ಬರ ತೆಗೆದುಹಾಕಿ’


ಪ್ರಜಾವಾಣಿ ವಾರ್ತೆ

ವಿಜಯಪುರ: ‘ನಮ್ಮಲ್ಲಿ ಪ್ರತಿ ವರ್ಷ 500ರಿಂದ 600 ಮಿ.ಮೀ. ಮಳೆಯಾಗುತ್ತದೆ. ಆದರೂ ಸಹ ನಾವು ಬರಗಾಲ ಎಂದು ದೂರುತ್ತೇವೆ. ಮೊದಲು ನಮ್ಮ ಮನದ ಬರವನ್ನು ತೆಗೆದು ಹಾಕಬೇಕು’ ಎಂದು ತೋಟಗಾರಿಕೆ - ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ಎಲ್.ಮಹೇಶ್ವರ ಹೇಳಿದರು.

ಇಲ್ಲಿನ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಗುರುವಾರ ನಡೆದ ಕ್ಯಾಂಪಸ್ ವೈ-ಫೈ ಲೋಕಾರ್ಪಣೆ ಹಾಗೂ ‘ಸ್ಪಂದನ’ ಪರಿಚಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇರುವ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ವಿವೇಕ ಮತ್ತು ದೃಢ ಸಂಕಲ್ಪ ಇಲ್ಲದಿರುವುದು ಮಾತ್ರ ನೋವಿನ ಸಂಗತಿ ಎಂದರು.

‘ಕಣ್ಣಿಗೆ ಕಾಣುವ ಶಕ್ತಿಗಳಾದ ಪೋಷಕರು, ಗುರುಗಳು, ಅನ್ನದಾತರಾದ ರೈತರು, ರಕ್ಷಣೆ ನೀಡುವ ಸೈನಿಕರನ್ನು ವಿದ್ಯಾರ್ಥಿಗಳು ಪ್ರತಿ ದಿನ ಸ್ಮರಿಸಬೇಕು. ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಅದಮ್ಯ ಚೇತನಗಳನ್ನು ರೂಪಿಸಿ, ಅವರನ್ನು ಸದೃಢಗೊಳಿಸಲು ಇಂತಹ ಸ್ಪಂದನ ಕಾರ್ಯಕ್ರಮ ಸ್ಫೂರ್ತಿಯಾಗುತ್ತವೆ’ ಎಂದು ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿ.ವಿ. ಕುಲಪತಿ ಪ್ರೊ.ಸಬೀಹಾ ಮಾತನಾಡಿ ‘ಒಂಟಿಯಾಗಿ ಮಾಡಿದ ಕೆಲಸಕ್ಕೆ ಪರಿಮಿತಿ ಇರುತ್ತದೆ. ಆದರೆ ಅದೇ ಕೆಲಸವನ್ನು ಒಗ್ಗಟ್ಟಿನಿಂದ ಮಾಡಿದಾಗ ಬಹುದೊಡ್ಡ ಶಕ್ತಿ ನಮ್ಮಿಂದ ಹೊರಹೊಮ್ಮುತ್ತದೆ ಹಾಗೂ ನಮ್ಮೆಲ್ಲರ ವ್ಯಕ್ತಿತ್ವ ಅರಳುತ್ತದೆ’ ಎಂದರು.



ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿ.ವಿ.ಯಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ತೋಟಗಾರಿಕಾ ವಿ.ವಿ. ಕುಲಪತಿ ಡಾ.ಡಿ.ಎಲ್.ಮಹೇಶ್ವರ ಮಾತನಾಡಿದರು. ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ಕುಲಸಚಿವ ಪ್ರೊ.ಕೆ.ಪಿ.ಶ್ರೀನಾಥ ಇದ್ದಾರೆ

> ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವನ್ನು ಹಸಿರೀಕರಣ ಮಾಡುವಲ್ಲಿ ಪ್ರತಿಯೊಬ್ಬರು ಕೈಜೋಡಿಸಬೇಕು, ಪರಿಸರ ರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ
>
> **ಡಾ.ಡಿ.ಎಲ್.ಮಹೇಶ್ವರ**
>
> ತೋಟಗಾರಿಕೆ ವಿ.ವಿ. ಕುಲಪತಿ

ಕುಲಸಚಿವ ಪ್ರೊ.ಕೆ.ಪಿ.ಶ್ರೀನಾಥ ಕ್ಯಾಂಪಸ್ ವೈಫೈ ಲೋಕಾರ್ಪಣೆ ಮಾಡಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿನಿಯರು ಹೊರ ತಂದ ಮಹಿಳಾ ಧ್ವನಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ವಿ.ನಾಯಕ ಉಪಸ್ಥಿತರಿದ್ದರು. ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ, ಬೋಧಕೇತರ ಸಿಬ್ಬಂದಿಗಳು, ಸಂಶೋಧನಾ ಮತ್ತು

**ಮುಖ್ಯಾಂಶಗಳು**

- ವಿಶ್ವವಿದ್ಯಾಲಯದಲ್ಲಿ ಕ್ಯಾಂಪಸ್ ವೈ-ಫೈ ಲೋಕಾರ್ಪಣೆ
- ಮಹಿಳಾ ಧ್ವನಿ ವಿಶೇಷ ಸಂಚಿಕೆ ಬಿಡುಗಡೆ
- ಒಗ್ಗಟ್ಟೇ ದೊಡ್ಡ ಶಕ್ತಿ

ಸ್ನಾತಕೋತ್ತರ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಪ್ರದರ್ಶಕ ಕಲೆಗಳ ವಿಭಾಗದ ವಿದ್ಯಾರ್ಥಿನಿಯರು ಮಹಿಳಾ ಗೀತೆ ಹಾಡಿದರು.

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ.ಓಂಕಾರ ಕಾಕಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಹನುಮಂತಯ್ಯ ಪೂಜಾರಿ ನಿರೂಪಿಸಿದರು. ಭಾರತಿ ಹಿರೇಮಠ ವಂದಿಸಿದರು.

Event: Celebration of Daughter's day.
Date: 1-6-2017
Resource Person: Dr. D. L. Maheshwar.
Dept: KSAWUV.

KARNATAKA STATE AKKAMAHADEVI WOMEN'S UNIVERSITY, VIJAYAPURA

DIRECTORATE OF STUDENT WELFARE

## Spandana (Daughters Day) -2017-18

Spandana (Daughters Day) Programme is an Induction Programme for first year students organized by DSW every year. The objective of this programme is to give introduction and information about the facilities of University and about all Cell & Directorates to newly admitted students.

**Details of Spandana Programme -2017-18**

Date 31-08-2017

Venue :- Dr. Ambedkar Bhavan, KSWU, Vijayapur

Chef Guest:- Dr. D.L. Maheshwar, Vice-Chancellor, Articulture Science University, Bagalakot.

President: - Prof. Sabiha Boomigouda, Vice-Chancellor, KSAWU, Vijayapur

Students Participated:- 650.

DIRECTOR
Student Welfare Directorate
Akkamahadevi Women's University
VIJAYAPURA-586108

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ


(ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ)

## ಕ್ಯಾಂಪಸ್ ವೈ-ಫೈ ಲೋಕಾರ್ಪಣೆ

ಹಾಗೂ 2017-18 ನೇಯ ಸಾಲಿಗೆ ಪ್ರವೇಶ ಪಡೆದ

ವಿದ್ಯಾರ್ಥಿನಿಯರ ಪರಿಚಯ ಕಾರ್ಯಕ್ರಮ

## "ಸ್ಪಂದನ"



ಮುಖ್ಯ ಅತಿಥಿಗಳು : **ಡಾ.ಡಿ.ಎಲ್ ಮಹೇಶ್ವರ**, ಕುಲಪತಿಗಳು
ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾನಿಲಯ, ಬಾಗಲಕೋಟೆ

ಅಧ್ಯಕ್ಷತೆ : **ಪ್ರೊ.ಸಬಿಹಾ ಭೂಮಿಗೌಡ**, ಕುಲಪತಿಗಳು
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ದಿನಾಂಕ: 31-08-2017 ಸಮಯ : ಮಧ್ಯಾಹ್ನ 11.30 ಗಂಟೆಗೆ ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಭವನ, ಜ್ಞಾನಶಕ್ತಿ ಆವರಣ, ವಿಜಯಪುರ


### ತಮಗೆಲ್ಲ ಆದರದ ಸ್ವಾಗತ

ಪ್ರೊ.ಓಂಕಾರ ಕಾಕಡೆ
ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ

ಡಾ.ಹನುಮಂತಯ್ಯ ಪೂಜಾರಿ
ಸಹಾಯಕ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ

ಪ್ರೊ.ಕೆ.ಚಿತ್ರನಾಥ
ಕುಲಸಚಿವರು

DIRECTOR
Student Welfare Directorate
Akkamahadevi Women's University,
VIJAYAPURA-586108




DIRECTOR
Student Welfare Directorate
Akkamahadevi Women's University
VIJAYAPURA-586108

# KARNATAKA STATE AKKAMAHADEVI WOMEN'S UNIVERSITY, VIJAYAPURA

## DIRECTORATE OF STUDENT WELFARE

## Spandana (Daughters Day) -2018-19

Spandana (Daughters Day) Programme is an Induction Programme for first year students organized by DSW every year. The objective of this programme is to give introduction and information about the facilities of University and about all Cell & Directorates to newly admitted students.

**Details of Spandana Programme -2018-19**

Date 18-09-2018

Venue :- Dr. Ambedkar Bhavan, KSWU, Vijayapur

Chef Guest:- Dr. Bhuvaneswari Hegade, Rt. Professor, Mangalore University.

President :- Prof. Sabiha Boomigouda, Vice-Chancellor, KSAWU, Vijayapur

Students Participated:- 600.

DIRECTOR
Student Welfare Directorate
Akkamahadevi Women's University,
VIJAYAPURA-586108

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ)

2018-19 ನೇಯ ಸಾಲಿಗೆ ಪ್ರವೇಶ ಪಡೆದ
ವಿದ್ಯಾರ್ಥಿನಿಯರ ಪರಿಚಯ ಕಾರ್ಯಕ್ರಮ

## "ಸ್ಪಂದನ"

ಮುಖ್ಯ ಅತಿಥಿಗಳು

**ಡಾ.[illegible]ವನೇಶ್ವರಿ ಹೆಗಡೆ**

ಖ್ಯಾತ ಸಾಹಿತಿಗಳು ಮತ್ತು ನಿವೃತ್ತ ಪ್ರಾಧ್ಯಾಪಕರು
ಮಂಗಳೂರು ವಿಶ್ವವಿದ್ಯಾನಿಲಯ.

ಅಧ್ಯಕ್ಷತೆ

**ಪ್ರೊ. ಸಬಿಹಾ ಭೂಮಿಗೌಡ**

ಕುಲಪತಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ದಿನಾಂಕ: 18-09-2018 ಸಮಯ: ಮಧ್ಯಾಹ್ನ 2.00 ಗಂಟೆಗೆ
ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಭವನ, ಜ್ಞಾನಶಕ್ತಿ ಆವರಣ, ವಿಜಯಪುರ

**ತ[illegible] ಆದರದ ಸ್ವಾಗತ**

| | |
|---|---|
| [illegible] | [illegible] |
| ನಿರ್ದೇಶಕರು<br>ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ | ಕುಲಸಚಿವರು, ಮವಿವಿ |

DIRECTOR
Student Welfare Directorate
Akkamahadevi Women's University
VIJAYAPURA-586108



DIRECTOR
Student Welfare Directorate
Akkamahadevi Women's University,
VIJAYAPURA-586108

# KARNATAKA STATE AKKAMAHADEVI WOMEN'S UNIVERSITY, VIJAYAPURA
## DIRECTORATE OF STUDENT WELFARE

## Spandana (Daughters Day) -2019-20

Spandana (Daughters Day) Programme is an Induction Programme for first year students organized by DSW every year. The objective of this programme is to give introduction and information about the facilities of University and about all Cell & Directorates to newly admitted students.

**Details of Spandana Programme -2019-20**

Date 23-09-2019

Venue :- Kannada Bhavana, KSAWU, Vijayapur.

Chef Guest:- Smt. Nirmala Channappa, Actress, Director, Sai Nirmala Production, Bangalore.

President :- Prof. Sabiha Boomigouda, Vice-Chancellor , KSAWU, Vijayapur

Students Participated:- 700.

DIRECTOR
Student Welfare Directorate
Akkamahadevi Women's University
VIJAYAPURA-586108

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ.
ವಿಜಯಪುರ

ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ

# ಪುತ್ರಿಯರ ದಿನ (ಸ್ಪಂದನ)

ಮುಖ್ಯ ಅತಿಥಿಗಳು :
**ಶ್ರೀಮತಿ. ನಿರ್ಮಲಾ ಚನ್ನಪ್ಪ**
ನಟಿ, ನಿರ್ದೇಶಕಿ, ನಿರ್ಮಾಪಕಿ
ಸಾಯಿನಿರ್ಮಲಾ ಪ್ರೊಡಕ್ಷನ್ಸ್, ಬೆಂಗಳೂರು.

ಅಧ್ಯಕ್ಷತೆ :
**ಪ್ರೊ. ಸಬಿಹಾ ಭೂಮಿಗೌಡ**
ಕುಲಪತಿಗಳು
ಕ.ರಾ.ಅ.ಮ.ವಿ.ವಿ. ವಿಜಯಪುರ

ದಿನಾಂಕ: 23-09-2019 ಸಮಯ : ಮಧ್ಯಾಹ್ನ 2-30 ಗಂಟೆಗೆ

ಕನ್ನಡ ಅಧ್ಯಯನ ವಿಭಾಗದ ಸಭಾ ಭವನ, ಕ.ರಾ.ಅ.ಮ.ವಿ.ವಿ.
ವಿಜಯಪುರ

ಸರ್ವರಿಗೂ ಆದರದ ಸ್ವಾಗತ

[illegible]
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ.

**ಪ್ರೊ. ಆರ್. ಸುನಂದಮ್ಮ**
ಕುಲಸಚಿವರು
ಕ.ರಾ.ಅ.ಮ.ವಿ.ವಿ. ವಿಜಯಪುರ

DIRECTOR
Student Welfare Directorate
Akkamahadevi Women's University,
VIJAYAPURA-586108



DIRECTOR
Student Welfare Directorate
Akkamahadevi Women's University
VIJAYAPURA-586108

KARNATAKA STATE AKKAMAHADEVI WOMEN'S UNIVERSITY, VIJAYAPURA

DIRECTORATE OF STUDENT WELFARE

# Spandana (Daughters Day) -2020-21

Spandana (Daughters Day) Programme is an Induction Programme for first year students organized by DSW every year. The objective of this programme is to give introduction and information about the facilities of University and about all Cell & Directorates to newly admitted students.

**Details of Spandana Programme -2020-21**

Date 30-01-2021

Venue :- Kannada Bhavana, KSAWU, Vijayapur

Chef Guest:- Dr. V. Bhagylaxmi, Joint Director, State Treasury Department, Bangalore.

President :- Prof. B.K. Tulasimal, Vice-Chancellor , KSAWU, Vijayapur

Students Participated:- 600.

DIRECTOR
Student Welfare Directorate
Akkamahadevi Women's University,
VIJAYAPURA-586108

## ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
## ವಿಜಯಪುರ

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

2020-21 ನೇ ಶೈಕ್ಷಣಿಕ ಸಾಲಿನಲ್ಲಿ
ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಸ್ವಾಗತ ಕೋರುವ

# ಪುತ್ರಿಯರ ದಿನ - ಸ್ಪಂದನ

ಕಾರ್ಯಕ್ರಮ

ಮುಖ್ಯ ಅತಿಥಿಗಳು :

**ಡಾ. ಬಿ. ಭಾಗ್ಯಲಕ್ಷ್ಮಿ** ಕೆ.ಎ.ಎಸ್

ಜಂಟಿ ನಿರ್ದೇಶಕರು,
ರಾಜ್ಯ ಖಜಾನೆ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು

ಅಧ್ಯಕ್ಷತೆ :

**ಪ್ರೊ. ಬಿ. ಕೆ. ತುಳಸಿಮಾಲ**

ಕುಲಪತಿಗಳು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಶನಿವಾರ ದಿನಾಂಕ 30-01-2021 ಬೆಳಿಗ್ಗೆ 11-30 ಗಂಟೆಗೆ
ಸ್ಥಳ : ಕನ್ನಡ ಅಧ್ಯಯನ ವಿಭಾಗದ ಸಭಾ ಭವನ

## ಸರ್ವರಿಗೂ ಆದರದ ಸ್ವಾಗತ

**ಡಾ. ಸಕ್ಪಾಲ್ ಹೂವಣ್ಣ**
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ

**ಪ್ರೊ. ಆರ್. ಸುನಂದಮ್ಮ**
ಕುಲಸಚಿವರು
ಕ.ರಾ.ಅ.ಮ.ವಿ.ವಿ. ವಿಜಯಪುರ

DIRECTOR
Student Welfare Directorate
Akkamahadevi Women's University,
VIJAYAPURA-586108



DIRECTOR
Student Welfare Directorate
Akkamahadevi Women's University,
VIJAYAPURA-586108

KARNATAKA STATE AKKAMAHADEVI WOMEN'S UNIVERSITY, VIJAYAPURA

DIRECTORATE OF STUDENT WELFARE

## Spandana (Daughters Day) -2021-22

Spandana (Daughters Day) Programme is an Induction Programme for first year students organized by DSW every year. The objective of this programme is to give introduction and information about the facilities of University and about all Cell & Directorates to newly admitted students.

**Details of Spandana Programme -2021-22**

Date 23-02-2022

Venue :- Kannada Bhavana, KSAWU, Vijayapur

Chef Guest:- Dr. Mallamma Yalawar, Precedent, Chatannya Mhila Sahkari Bank, Vijayapur

President :- Prof. B.K. Tulasimal, Vice-Chancellor

Students Participated:- 750.

DIRECTOR
Student Welfare Directorate
Akkamahadevi Women's University,
VIJAYAPURA-586108

# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ

2021-22 ನೇ ಶೈಕ್ಷಣಿಕ ಸಾಲಿನಲ್ಲಿ

ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಸ್ವಾಗತ ಕೋರುವ

## ಪುತ್ರಿಯರ ದಿನ - ಸ್ಪಂದನ

ಕಾರ್ಯಕ್ರಮ

ಮುಖ್ಯ ಅತಿಥಿಗಳು :

ಡಾ. ಮಲ್ಲಮ್ಮ ಯಾಳವಾರ

ಸಬಲಾ ಸಂಸ್ಥೆಯ ಸಂಸ್ಥಾಪಕರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
ಮತ್ತು ಅಧ್ಯಕ್ಷರು, ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್,ವಿಜಯಪುರ

ಅಧ್ಯಕ್ಷತೆ :

**ಪ್ರೊ. ಬಿ. ಕೆ. ತುಳಸಿಮಾಲ**

ಕುಲಪತಿಗಳು, ಕ.ರಾ.ಅ.ಮ.ವಿ.ವಿ, ವಿಜಯಪುರ

ಉಪಸ್ಥಿತರು:

**ಶ್ರೀ. ಎಂ.ಎಸ್ [illegible]ರಗಸ್ತಿ** K.A.S

ಕುಲಸಚಿವರು, ಕ.ರಾ.ಅ.ಮ.ವಿ.ವಿ, ವಿಜಯಪುರ

**ಪ್ರೊ. ರಮೇಶ ಕೆ.**

ಕುಲಸಚಿವರು (ಮೌಲ್ಯಮಾಪನ), ಕ.ರಾ.ಅ.ಮ.ವಿ.ವಿ, ವಿಜಯಪುರ

**ಪ್ರೊ. ಎಸ್. [illegible] ಕಾಮಶೆಟ್ಟಿ**

ಆರ್ಥಿಕ ಅಧಿಕಾರಿಗಳು, ಕ.ರಾ.ಅ.ಮ.ವಿ.ವಿ, ವಿಜಯಪುರ

ಬುಧವಾರ ದಿನಾಂಕ 23-02-2022 ಬೆಳಿಗ್ಗೆ 11-00 ಗಂಟೆಗೆ


ಸ್ಥಳ : ಕನ್ನಡ ಅಧ್ಯಯನ ವಿಭಾಗದ ಸಭಾ ಭವನ, ಕ.ರಾ.ಅ.ಮ.ವಿ.ವಿ, ವಿಜಯಪುರ

ಸರ್ವರಿಗೂ ಆದರದ ಸ್ವಾಗತ

**[illegible]. ಅಶ್ವಿನಿ ಕೆ.ಎನ್**
ಸಹಾಯಕ ನಿರ್ದೇಶಕರು,
ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ,
ಕ.ರಾ.ಅ.ಮ.ವಿ.ವಿ. ವಿಜಯಪುರ

**ಪ್ರೊ. ವಿಜಯಾ ಕೋರಿಶೆಟ್ಟಿ**
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ,
ಕ.ರಾ.ಅ.ಮ.ವಿ.ವಿ. ವಿಜಯಪುರ

DIRECTOR
Student Welfare Directorate
Akkamahadevi Women s University
VIJAYAPURA-586108



DIRECTOR
Student Welfare Directorate
Akkamahadevi Women's University,
VIJAYAPURA-586108

ಕನ್ನಡ ಪ್ರಭ. ದಿ. 24/2/22 ಪು-03

# ಶ್ರಮದಿಂದ ಸಾಧಕರಾಗಲು ಸಾಧ್ಯ

## ವಿದ್ಯಾರ್ಥಿನಿಯರಿಗೆ ಸ್ವಾಗತ ಕೋರುವ 'ಪುತ್ರಿಯರ ದಿನ-ಸ್ಪಂದನ' ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಮಹಿಳೆಯರು ಯಾವುದೇ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ, ಆ ಸಮಸ್ಯೆಗಳನ್ನು ಬಗೆಹರಿಸಿಕೊಂಡು ತಮ್ಮ ಗುರಿ ಸಾಧನೆಯೆಡೆಗೆ ಶ್ರಮಿಸಿದಾಗ ಮಾತ್ರ ಅವರು ಸಾಧಕರಾಗಿ ಹೊರಹೊಮ್ಮಲು ಸಾಧ್ಯ ಎಂದು ಸಬಲಾ ಸಂಸ್ಥೆಯ ಸಂಸ್ಥಾಪಕಿ ಹಾಗೂ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕಿನ ಅಧ್ಯಕ್ಷೆ ಡಾ.ಮಲ್ಲಮ್ಮ ಯಾಳವಾರ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ವತಿಯಿಂದ ಬುಧವಾರ ನಡೆದ 2021-22ನೇ ಸಾಲಿನ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಸ್ವಾಗತ ಕೋರುವ ''ಪುತ್ರಿಯರ ದಿನ-ಸ್ಪಂದನ'' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳೆಯರ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಉದ್ಯೋಗ ಹಾಗೂ ಮಹಿಳೆಯರ ಸ್ವಾವಲಂಬನೆಯ ಕುರಿತು ಪ್ರಾಶಸ್ತ್ಯ ನೀಡಿದ್ದರೂ ಇನ್ನೂ ಅನೇಕ ಮಹಿಳೆಯರು ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಈ ಎಲ್ಲ ಶೋಷಣೆಯನ್ನು ತಡೆಗಟ್ಟುವ ಕಾನೂನಗಳ ಬಗ್ಗೆ ಅರಿವು ಮೂಡಿಸುವದರ ಜೊತೆಗೆ ಕಾನೂನುಗಳನ್ನು ಹೇಗೆ ಜಾರಿಗೊಳಿಸಬೇಕು ಎನ್ನುವುದರ ಬಗ್ಗೆ ಚಿಂತನೆ ನಡೆಸಬೇಕಿದೆ ಎಂದರು.

ಸಮಾಜದ ವಿವಿಧ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳೆಗೆ ಅವಕಾಶ ನೀಡಬೇಕು. ಅಂತಹ ಅವಕಾಶಗಳು ಸಿಗದಿದ್ದಾಗ ಅದನ್ನು ಪಡೆಯುವ ನಿಟ್ಟಿನಲ್ಲಿ ಮಹಿಳೆ ಕೆಲಸ ಮಾಡಬೇಕು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆ ಸಾಧನೆ ಮಾಡಿದಾಗ, ಅವರಿಗೆ ಸಮಾಜದಲ್ಲಿ ತಮ್ಮದೇ ಆದ ಸ್ಥಾನಮಾನ ಸಿಗುತ್ತದೆ ಎಂದರು.



ಜಗತ್ತಿಗೆ ಮಾದರಿಯಾದ, ಮಹಿಳೆಯರ ಶಿಕ್ಷಣಕ್ಕಾಗಿ ಹೋರಾಡಿದ ಸಾವಿತ್ರಿಬಾಯಿ ಫುಲೆ ಅವರ ತತ್ವಗಳನ್ನು, ಮೌಲ್ಯಗಳನ್ನು ನಾವು ಎತ್ತಿ ಹಿಡಿಯಬೇಕಿದೆ. ಆದ್ದರಿಂದ ಯಾವೊಬ್ಬ ವಿದ್ಯಾರ್ಥಿನಿಯು ಶಿಕ್ಷಣದಿಂದ ವಂಚಿತರಾಗಬಾರದು. ಶಿಕ್ಷಣವನ್ನು ಜ್ಞಾನಕ್ಕಾಗಿ ಪಡೆಯಬೇಕೆ ವಿನಃ ಕೆಲಸಕ್ಕಾಗಿ ಅಲ್ಲ, ಶಿಕ್ಷಣ ದೊರೆತಾಗ ಮಾತ್ರ ನಾವು ಬದಲಾವಣೆ ತರಲು ಸಾಧ್ಯ, ಸಮ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂದು ಹೇಳಿದರು.

ಕುಲಸಚಿವ ಎಂ.ಎನ್.ಚೋರಗಸ್ತಿ ಮಾತನಾಡಿ, ಮಹಿಳಾ ವಿವಿಯಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿನಿಯರು ತಾವು ಪಡೆದ ಶಿಕ್ಷಣದಿಂದ ಸಮಾಜವನ್ನು ಬೆಳಗಿ, ಎಲ್ಲರಿಗೂ ಮಾದರಿಯಾಗಬೇಕು ಎಂದು ಹೇಳಿದರು.

ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ಮಾತನಾಡಿ, ಸುಸ್ಥಿರ ಅಭಿವೃದ್ಧಿಯೆಡೆಗೆ ಸಾಗಲು ಉನ್ನತ ಶಿಕ್ಷಣ ಸಹಾಯಕಾರಿಯಾಗಿದೆ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಪಡೆದಾಗ ಮಾತ್ರ ವಿದ್ಯಾರ್ಥಿನಿಯರು ಅಭಿವೃದ್ಧಿಯ, ಭರವಸೆಯ ಮೂರ್ತರೂಪವಾಗಿ ನಿಲ್ಲಲು ಸಾಧ್ಯ. ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಸ್ವಪ್ರೇರಣೆ ಅತ್ಯಗತ್ಯ. ನಮ್ಮ ಧ್ಯೇಯವನ್ನು, ಗುರಿಯನ್ನು ಸಾಧಿಸಲು ನಾವು ಸ್ವ-ಇಚ್ಛೆಯಿಂದ ಮುಂದೆ ಬರಬೇಕು. ಸ್ವಾಭಿಮಾನಿ ಬದುಕನ್ನು ಕಟ್ಟಿಕೊಳ್ಳಲು ಶೈಕ್ಷಣಿಕ ಪ್ರಗತಿ ಅತ್ಯಗತ್ಯ ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ.ರಮೇಶ ಕೆ, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕಿ ಪ್ರೊ.ವಿಜಯಾ ಕೋರಿಶೆಟ್ಟಿ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಶಾಂತಾದೇವಿ.ಟಿ, ಸಹಾಯಕ ನಿರ್ದೇಶಕಿ ಅಶ್ವಿನಿ.ಕೆ.ಎನ್ ಮುಂತಾದವರು ಇದ್ದರು.

7.1.9 (1M)

IQAC

Event: Daughter's Day Celebration
Date: 24/2/22, Kannada Prabha, Page 3
Dept: KSAWU
Resource person: Dr. Mallamma Yalwar

# ಮಹಿಳಾ ವಿವಿ: ರಾಷ್ಟ್ರೀಯ ಗಣಿತ ದಿನಾಚರಣೆ

[illegible]



[illegible] ಗಣಿತ ಹಾಗೂ ಸಂಖ್ಯಾಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

Event celebration of
National Mathematics day

Date : 22 . 1 . 2020

Resource person Dr Venugopal

Dept Bhaskaracharya study
Chair